Regd No B G 155

7—9—1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಮನೆ ಸಂಸ್ಥೇದಾರ್ ಎಂ ವಿ ಸೆಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ತೀರ ಹಾಸ್ಯಾಸ್ಪದ

ಹರಿದ್ವಾರದಿ ಫೇ 27 ರಲ್ಲಿ ಬಂದ ಈ ವಾರ್ತೆ ಬಹಳ ಸ್ವಾರಸ್ಯವಾಗಿದೆ : ಅಂದು ಗೃಹ ಮಂತ್ರಿ ಶ್ರೀ ನಂದಾರವರು ನೆಹರೂ ವಂ ಪ್ರಥವ ಪುಣ್ಯ ತಿಥಿಯಂದು ಕೈಲಾಸಘಾಟಿನಲ್ಲಿ ಅವರಿಗಾಗಿ ತರ್ಪಣ ಕೊಟ್ಟರು ; ಜೊತೆಗೆ ಹಂಕಿ ಪೀರಿಯಲ್ಲಿ ನಡೆದ ಯಜ್ಞದಲ್ಲಿ ಭಾಗವಹಿಸಿದ್ದರು.

‡ ಶ್ರೀ ನಂದಾರವರು ಹರಿದ್ವಾರದಲ್ಲಿ ತರ್ಪಣ ಅಥವಾ ಯಜ್ಞ ನಡೆಸ ವ ಅವಶ್ಯಕತೆಗೆ ನೆಹರೂ ವರಿಗೆ ಹಿಂದೂಧರ್ಮದಲ್ಲಿ ನಂಬಿಕೆ ಈತ್ತೇ ? ಜನ ಹಿಂದುತ್ವಾದಿಗಳು ಕಾರ್ಯಗಳು— ಅವಂ ನಡತೆ ಮತ್ತು ಸ್ವಭಾವಗಳ ಬೇರೆ ರೀತಿಯ ಕತೆ ಹೇಳುತ್ತದೆ ; ತಾವು ಜನ್ಮತಃ ಹಿಂದು, ಸಾಂಸ್ಕೃತಿಯಲ್ಲಿ ಮುಸ್ಲಿಂ ವಿದ್ಯಾಭ್ಯಾಸದಿಂದ ಏರೋಪ್ಯನೆಂದು ಅವರು ಹೇಳಿರುವರು ; ಹಿಂದೂ ಧರ್ಮದಲ್ಲಿ ನಂಬಿಕೆಯಿಲ್ಲದ ದೇವರಲ್ಲಿ ನಂಬಿಕೆಯಿಲ್ಲದಂಥವರಿಗೆ ತರ್ಪಣ ಕೊಡುವುದು ಹಾಸ್ಯಾಸ್ಪದ ಕೃತ್ಯವಲ್ಲವೇ ?

ಲಂಡನ್ನಿನಲ್ಲಿ ಒಬ್ಬ ಇಂಗ್ಲೀಷಿನವನು ಜಪಹರಲಾಲರನ್ನು 'ರಾಂರಾಂ' ಎಂದು ಸ್ವಾಗತಿಸಿದಾಗ, ಅವರಿಗೆ ಗಾಬರಿಗೊಳಿಸುವ ಧಕ್ಕೆಯಾಗಿ, ತಾ ಂ ಬಾ ನೊಂದುಕೊಂಡರೆಂದೂ, 'ಮತ್ತೆ ಕೆಲವು ನಿಮಿಷಗಳ ನಂತರ 'ನನಗೆ ಮತದಲ್ಲಿ ನಂಬಿಕೆಯಿಲ್ಲ' ಎಂದು ಹೇಳಿದರು ; ಬೆಜವಾಡಾದಲ್ಲಿ ಒಂದು ಪತ್ರಿಕಾ ಸಂದರ್ಶನದಲ್ಲಿ (ಟ್ರೂತ್ ಸಂ. 4 ಪುಟ 499) ಬೊಂಬಾಯಿನಲ್ಲಿ ಮುಸ್ಲಿಂ ಮತ ಭ್ರಾಂತಿಯಿಂದ ನಡೆದ ಹಿಂದೂ-ಮುಸ್ಲಿಂ ಗಲಭೆ ವಿಷಯದಲ್ಲಿ 'ಭಾರತದಲ್ಲಿ ಈ ವಶು ಸ್ವಭಾವವು ಮತಕ್ಕೆ ಸಂಬಂಧಿಸಿದ್ದಾದರೆ, ಆ ಮತಕ್ಕೆ ಸಂಬಂಧಿಸಲು ಯಾವ ಯೋಗ್ಯತೆಯೂ ಇಚ್ಛಿಸುವುದಿಲ್ಲ ಎಂದು ಹೇಳಿದನು . ಮತಕ್ಕಿಂತ ಹೆಚ್ಚಾಗಿ ಮಾನವ ಶ್ರೇಯಸ್ಸಿನ ಹೃದಯಕ್ಕೆ ಯಾವುದೂ ಬಡಿಯುವುದಿಲ್ಲ, ಅದ್ದರಿಂದ ಪಂ ॥ ನೆಹರೂವರು ಅದನ್ನು ಹೊಳಿಯಲು ಅವಕಾಶ ಬಿಡಲಿಲ್ಲ ಭಾರತದಲ್ಲಿ ಮತವು ಈಗಿಗಿಂತಲೂ ಹೆಚ್ಚು ಚಟುವಟಿಕೆ ಶಕ್ತಿಯುಕ್ತವಾಗಿದ್ದಾಗ, ಇಂತಹ ಗಲಾಟೆಗಳು ಕಾಣವಾಗಿದ್ದವು ; ಅದರೂ ಈ ಗಲಭೆಗಳ ಹಿಂದೆ ಮತ ಮತ್ತು ಮತೀಯ ಜನವು ಹಿಂದಿರುವರೆಂದು ಅವರು ಹೇಳಲು ಹಿಂಜರಿಯಲಿಲ್ಲ ; ಹೀಗಿರುವಾಗ ಅಂತಹ ನಾಸ್ತಿಕರಿಗೆ ತರ್ಪಣ ಮತ್ತು ಯಜ್ಞ ಮಾಡಲು ಹ್ಯಾತಕೊರಿಯಬೇಕೆ ?

ಭಗವಂತನು ಹೇಳಿತ್ತಾನೆ— ನನಗೆ ಅರ್ಪಿಸಿದ ಪೂಜೆಯು ವ್ಯರ್ಥವಾಗುವುದಿಲ್ಲ. ಎಂದು.

ಅದು ಎಷ್ಟು ಮಟ್ಟಿಗೆ ಫಲದಾಯಕವೆಂದರೆ, ಪೂಜೆಯಲ್ಲಿನ ಶ್ರದ್ಧೆ, ಭಕ್ತಿ ಮತ್ತು ನಂಬಿಕೆಯನ್ನು ಅನ್ವಯಿಸುತ್ತದೆ.

ಯಾವುದೋ ಶತ ಹೆಸರಿನಲ್ಲಿ ಪೂಜಾ ನಡೆಸಲಾಗುವುದೋ ಅವನಿಗೆ ಭಕ್ತಿ, ಮತ್ತು ನಂಬಿಕೆ ಇಲ್ಲದಿದ್ದರೆ ಈ ಮತೀಯ ಶಾಸ್ತ್ರೋಕ್ತ ಕರ್ಮ ನಡೆಸುವುದು ತೀರ ಹಾಸ್ಯಾಸ್ಪದವಲ್ಲವೆ ?

— Truth

ಮುನ್ನಡೆ

ಭಾರತ ಸೇನೆಗಳು ಗಡಿ ದಾಟಿ ಪಾಕೀಸ್ತಾನದ ಎಂಡನೆ ಹಿಂ ಪಟ್ಟಣವಾದ ಲಾಹೋರು ಕಡೆಗೆ ಹೋಗುತ್ತಿರುವ ವಂದಿ ಇದೆ

ಪಾಕಿಸ್ತಾನದ ಸ್ಪದೆ ಶದ ಮೇಲೆ ಭಾರತ ದಾಳಿ ಮಾಡಿಲ್ಲ

★

ಅಸ್ಸಾಂ ಪಂಜಾಬು ಪಶ್ಚಿಮ ಬಂಗಾಳ ಗಡಿಗಳನ್ನು ಬಲಪಡಿಸುವ ಅಜ್ಞೆ ಆಗಿದೆ.

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ 21 ವರೆ ಸಹಸ್ರ ಕೋಟಿ 4ನೆಯೋಜನೆಗೆ ಅಂಗೀಕಾರವಿತ್ತಿದೆ ರಕ್ಷಣೆಗೆ ಆದ್ಯತೆ ನೀಡಲಾಗಿದೆ

ಕಾಶ್ಮೀರ ಕಾರ್ಯಾಚರಣೆ ಕಟ್ಟ ಕಡೆಯದಾಗಿ ಆಗಬೇಕೆಂದು ಪ್ರಧಾನಿ ಶಾಸ್ತ್ರಿಗಳು ಕಾಂಗ್ರೆಸು ಪಾರ್ಲಿಮೆಂಟರಿ ಸಮಿತಿಯಲ್ಲಿ ತಿಳಿಸಿರುವರು

—

ಪಾಕಿಸ್ತಾನ ಮತ್ತು ಭಾರತ ಈ ದೇಶಗಳಲ್ಲಿ ಪರಸ್ಪರ ವಿಮಾನ ಸಂಚಾರ ಹಡಗು ಸಂಚಾರ ನಿಂತಿದೆ

—

ಇಂಗ್ಲೀಷನ್ನು ಏಕಮಾತ್ರ ಅಧಿಕೃತ ಭಾಷೆಯಾಗಿ ಮಾಡಬೇಕೆಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕಸಭೆಯಲ್ಲಿ ವೈ॥ ವಾಡಿಯಾ ತಿಳಿಸಿದರು

ನಾಳೆಯ ಪಂಚಾಂಗ

ವೈವಜ್ಞ ಶಿಖಾಮಣಿ
ಅಷ್ಟಾಕವರ್ಗಾವಿದ್ವಾ ಧರ್ಮಾಧಿಕಾರಿ
ಕಾಜಕಾರ್ಯಾಪಕ್ಷ, ಜ್ಯೋತಿರ್ವಿದ್ವನ್ಮಣಿ
ಸಂವತ್ಸರ ಕೃಷ್ಣಜೋಯಿ ಸಾವರಂಡ

ಶ ಬುಧವಾರ ತೃಯೋದಶಿ ತೃದಣ

ವಾರ್ತಾ ವಿಶೇಷಗಳು

★

ತಿನವೊಗ್ಗ ಜಿಲ್ಲೆಯಲ್ಲಿ ಇನ್ನೂರು ಕೇರಳ ಸಂಸಾರವು ಕೆಟ್ಟ ನಡತೆಯಿಂದ ಅರಣ್ಯದ ಗಿಡಗಳನ್ನು ಕತ್ತರಿಸಿತ್ತಿದ್ದುದಕ್ಕೆ ರಾಜ್ಯದ ಹೊರಗೆ ಕಳಿಸಲಾಗಿದೆ ಎಂದು ಮಂತ್ರಿ ಅಗಿದೆ

ಉತ್ಸವಾಸ ಮಾಡದಿರುವಂತೆ ಗೃಹ ಮಂತ್ರಿ ಶ್ರೀ ನಂದಾ ಸಂತ ಫತೇಸಿಂಗರಿಗೆ ತಿಳಿಸಿರುವರು

ಪಟ್ಟಣದ ಆಸ್ತಿ ತೆರಿಗೆ ಹೆಚ್ಚಿಸುವಂತೆ ಯೋಜನೆಯನ್ನು ಸಮಿತಿ ಸೂಚಿಸಿದೆ

ದೇಶದ ಸರ್ವರಂ ಬೆಂಬಲದಿಂದ ಕಾಶ್ಮೀರದಲ್ಲಿ ಕಾರ್ಯಾಚರಣೆ ಕೈಗೊಂಡಿರುವುದಾಗಿ ರಕ್ಷಣಾ ಮಂತ್ರಿ ಶ್ರೀ ಚವಾಣರವರು ತಿಳಿಸಿದರು

★

ದೇಶದಲ್ಲಿ ರೇಷನಿಂಗ್ ಜಾರಿ ಮಾಡಬೇಕೆಂದಿರುವ ನಿರ್ಧಾರವನ್ನು ಸರ್ಕಾರ ಪುನರ್ಪರಿಶೀಲಿಸಬೇಕೆಂದು ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ

ಕಾಶ್ಮೀರದಲ್ಲಿ ಶಾಂತಿ ಮತ್ತೆ ನೆಲೆಸಲು ಸಹಾಯ ಮಾಡಬೇಕೆಂದು ಪಾಕಿಸ್ತಾನ ಫೈಂಜು ಪ್ರಧಾನಿ ರಿಗೂ ಲಂಡ್ಜಿ ಪತ್ರವ ಮಾಡಿರುವುದಾಗಿ ಪಾಕೀಸ್ತಾನ ರಾಯಭಾರಿ ಕಚೇರಿ ತಿಳಿಸಿದೆ

★

ಪಾಕೀಸ್ತಾನ ಅಧ್ಯಕ್ಷ ಅಯೂಬರು ಸಂಯುಕ್ತ ಅರಬ ಗಣರಾಜ್ಯದ ಅಧ್ಯಕ್ಷರಾದ ನಾಸೆರರಿಗೆ ರಾಗದ ಒಕ್ಕಿದಿದ್ದಾರೆ ಪ್ರಾಯಶಃ ಕಾಶ್ಮೀರ ಕದನವಿರಾಮ ಸಂಬಂಧದ ವಿಚಾರ ಇರಬಹುದು

★

8-9-65
No

ಸಮಾಚಾರ ಸಂಗ್ರಹ

ಪಾಕೀಸ್ತಾನದ ಒತ್ತಾಯಕ್ಕೆ ಒಗ್ಗಿ ಕಾಶ್ಮೀರದ ಪ್ರತ್ಯೇ ಪೇಹಾರ ನೀತಿಗೆ ಭಾರತ ಒಪ್ಪುವುದಿಲ್ಲವೆಂದು ಪ್ರಧಾನಿ ಶಾಸ್ತ್ರಿಗಳು ನವ ದೆಹಲಿಯಲ್ಲಿ ತಿಳಿಸಿದರು

ಂ ಂ ಂ ಂ

ಶ್ರೀ ನಗರಕ್ಕೆ 25 ಮೈಲಿ ಅಗ್ನೇಯದಲ್ಲಿ ಪಾಕಿಸ್ತಾನಿ ದಾಳಿಕಾರರು ಮೊನ್ನೆ ಹಗುರ ವಿಮಾನ ಗಳಿಂದ ಗುಂಡು ಹಾರಿಸಿ ಕೈ ಬಾಂಬುಗಳನ್ನು ಹಾಕಿದರು ಅವನ್ನು ಹೊಡೆದೋಡಿಸಲಾಯಿತು

ಂ ಂ ಂ ಂ

ಹಾಜಿ ಪೀರ ಪಾಸ ಕಣಿವೆಯಲ್ಲಿ ಬಂಧಿಸಲಾದ ಪಾಕಿಸ್ತಾನಿ ಸೇನೆಯ ಕ್ಯಾಪ್ಟನ್ ಮುಸೂದ್ ತನಗೆ ಉರಿ ಸೇತುವೆ ಮತ್ತು ಸುತ್ತ ಮುತ್ತಿನ ಪ್ರಧಾನ ಕೊಂಡಿಗಳನ್ನು ಉಡಾಯಿಸಲು ನೇಮಿಸಲಾಗಿದೆ ಎಂದು ಒಪ್ಪಿದನು

ಂ ಂ ಂ

ಪಾಕಿಸ್ತಾನಕ್ಕೆ ಬೆಂಬಲ ಕೊಡಲು ಚೀನಾ ವಕ್ತೃ ದೃಢೀಕರಿಸಿದೆ

ಂ ಂ

ಕೇಂದ್ರದ ಪೆಟ್ರೋದಾರಿಗೆ ಉದ್ಯೋಗ ತೆರಿಗೆ ಮನ್ನಾ ಆಗಿದೆ.

ಗೋಂಕ್ಷಣೆಕ್ಕೆ ಬೆಂಬಲ ನೀಡಿ



ಶ್ರೀ ದ್ವಾರಕಾ ಜಗದ್ಗುರು ಮಹಾರಾಷ್ಟ್ರವಿಂಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾರಾಷ್ಟ್ರವಿ ಗಳವರು ಉದಾರ ಅನುಗ್ರಹ ಕೃಪೆಯಾಗಿದೆ —

ಅನ್ನಪೂರ್ಣದಲ್ಲಿ ಗೋಕ್ಷಣೆ, ಧರ್ಮಾದಯೆ, ಶಾಖಾಹಾರ, ಪಶುವೈದ್ಯ ವಿಚಾರ ಗಳಿಂದ ಕೂಡಿದ ವಿಶೇಷ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ನ್ಯೆಪೈ.

ಸಹಾಯಕರು ರೂ 10, ಪ್ರೋತ್ಸಾಹಕರು: ರೂ 25 ; (ಒಂದು ಸಾರಿಯಾಶ್ಚ)

ಗೋಕ್ಷಣೆಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಪದಾಧಿಕಾರಪೂರ್ವಕ ವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

★

Help The Gorakshana

★

ವುಡಲ್ಯಾಂಡ್ಸ್ ಜನಭರಿತ 2 ನೇ ವಾರ

ನೀವು ಇದುವರೆಗೂ ನೋಡದಿರುವ ಅದ್ಭುತ ದೃಶ್ಯಗಳನ್ನೂ, ವಿಚಿತ್ರಗಳನ್ನೂ ನೋಡಿ ಆನಂದಿಸಿ

ಭೂತ್ ಬಂಗ್ಲ (ಹಿಂದಿ) **Bhoot Bangla**

ಮುಮ್ತಾಜ್, ತನುಜ, ನಾಜಿರ್ ಹುಸೇನ್, ಅಸಿತ್ ಸೇನ್ ನಾನಾವಾಲ್ ಸಿಕಂದ್

ಪ್ರತಿ ದಿನ 3 ಪ್ರದರ್ಶನಗಳು

ಅಪೆರಾ ಜನಭರಿತ 2 ನೇ ವಾರ

ವೀರ ಅಭಿಮನ್ಯು (ತೆಲುಗು)

ಸೌತ್ — ಎನ್ ಟಿ ರಾಮರಾವ್, ಕಾಂಚನ, ಶಾಂತಾರಾವ್, ರಾಜನಾಲ ಪದ್ಮನಾಭಂ, ಸೋಮರ್ಬಾಬು, ಜಿ ವರಲಕ್ಷ್ಮಿ | ದಿನ 3 ಆಟಗಳು

SHAKTI

SUDHA

A Superb Tonic

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ, ಔಷಧಿ ಕೊಡಲಾಗುತ್ತದೆ

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharma prachara nirata M S Krishna Rao (Proprietor) at the Satyavadi Press Chamarajapuram, Mysore 4